ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಗಳಲ್ಲಿನ ಅಣೆಕಟ್ಟುಗಳಲ್ಲಿ ಹೂಳು ತೆಗೆಯುವುದು.

1816 - ಶ್ರೀ. ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಭಾರಿ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಯಡಿಯಲ್ಲಿರುವ ಅಣೆಕಟ್ಟುಗಳು ಯಾವುವು? ಅವುಗಳ ನಿರ್ಮಾಣ ಯಾವಾಗ ಪೂರ್ಣಗೊಂಡಿವೆ.

ಆ) ಈ ಅಣೆಕಟ್ಟುಗಳ ನೀರು ಸಂಗ್ರಹಣಾ ಸಾಮರ್ಥ್ಯ ಎಷ್ಟು?

ಇ) ಹೂಳೂ ತುಂಬಿರುವುದರಿಂದ ಎಷ್ಟು ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿದೆ.

ಈ) ಇದರಿಂದಾಗಿ ಎಷ್ಟು ಪ್ರದೇಶ ನೀರಾವರಿ ಸೌಲಭ್ಯದಿಂದ ವಂಚಿತವಾಗಿದೆ!

ಉ) ಈ ಹೂಳಿನಿಂದಾಗಿ ಕೃಷಿ ಉತ್ಪಾದನೆಯಲ್ಲಿ ಎಷ್ಟು ಕಡಿತವಾಗಿದೆ.

ಊ) ಈ ಹೂಳು ತುಂಬುವುದನ್ನು ತಡೆಯಲು ಸರ್ಕಾರ ಈಗ ಕೈಗೊಂಡಿರುವ ಕ್ರಮಗಳೇನು; (ಅಣೆಕಟ್ಟುವಾರು ವಿವರ ನೀಡುವುದು)

ಋ) ಇದಕ್ಕಾಗಿ ಈ ವರ್ಷ ಸರ್ಕಾರ ಆಯವ್ಯಯದಲ್ಲಿ ತೆಗೆದಿರಿಸಿದ ಹಣವೆಷ್ಟು;

ಶ್ರೀ. ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 12 ಅಣೆಕಟ್ಟುಗಳು ಭಾರಿ ನೀರಾವರಿ ಯೋಜನೆಯಡಿಯಲ್ಲಿ ಪೂರ್ಣಗೊಂಡಿರುತ್ತದೆ. (ಅಣೆಕಟ್ಟುವಾರು ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ).

ಆ) ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ.

ಈ) ಭೂ ಪ್ರದೇಶ ನೀರಾವರಿ ಸೌಲಭ್ಯದಿಂದ ವಂಚಿತವಾಗಿರುವ ಯಾವ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಪ್ರಶ್ನೆ (ಈ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಅಣೆಕಟ್ಟುಗಳಲ್ಲಿ ಮತ್ತು ಜಲಾಶಯಗಳಲ್ಲಿ ಹೂಳು ತುಂಬುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಭೂಸಂರಕ್ಷಣ ಮತ್ತು ಅರಣ್ಯ ಇಲಾಖೆಗಳೊಡನೆ ಸಮಾಲೋಚಿಸಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಜಲಾನಯನ ಪ್ರದೇಶದ ಪೋಷಣೆ.

2) ಜಲಾನಯನ ಪ್ರದೇಶದಲ್ಲಿ ಕಾಡು ಬೆಳೆಸುವ ಕಾರ್ಯಕ್ರಮ.

3) ಭೂ ಸಂ-ರಕ್ಷಣಾ ಕಾರ್ಯಕ್ರಮ

4) ಜಲಾಶಯದ ಅಂಚಿನಲ್ಲಿ ಸಾಗುವಳಿ ಮಾಡುವುದನ್ನು ತಡೆಗಟ್ಟುವುದು.

5) ಜಲಾಶಯದ ಅಂಚಿನಲ್ಲಿ ತಾರತಮ್ಯವಿಲ್ಲದೆ ಗಣಿಗಾರಿಕೆ ತಡೆಗಟ್ಟುವುದು.

ಖ) ಪ್ರಸ್ತುತ ಸಾಲಿನಲ್ಲಿ ಹೂಳು ತೆಗೆಯಲು ಹಣವನ್ನು ಮೀಸಲಿಡಲಾಗಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಅಣೆಕಟ್ಟೆಯ ಹೆಸರು	ಪೂರ್ಣಗೊಂಡ ವರ್ಷ	ನೀರು ಸಂಗ್ರಹಣಾ ಸಾಮರ್ಥ್ಯ	ಹೂಳು ತುಂಬಿರುವುದರಿಂದ ಕಡಿಮೆಯಾಗಿರುವ ನೀರು ಸಂಗ್ರಹಣಾ ಸಾಮರ್ಥ್ಯ. (ಟಿ.ಎಂ.ಸಿ.ಗಳಲ್ಲಿ)
1	2	3	4	5
1.	ಘಟಪ್ರಭಾ	1976	51.00	-
2.	ತುಂಗಾ ಅಣೆಕಟ್ಟು	1956	-	-
3.	ತುಂಗಭದ್ರ	1953	133.00	21.500
4.	ವಾಣಿವಿಲಾಸ ಸಾಗರ	1908	30.020	-
5.	ಕೃಷ್ಣರಾಜ ಸಾಗರ	1931	49.450	1.040
6.	ನುಗು	1959	5.430	-
7.	ನಾರಾಯಣಪುರ	1982	37.860	5.117
8.	ಮಲಪ್ರಭಾ	1972	37.730	2.770
9.	ಭದ್ರ	1966	71.530	-
10.	ಹೇಮಾವತಿ	1982	37.100	-
11.	ಹಾರಂಗಿ	1980-81	8.500	-
12.	ಕಬಿನಿ	1974	19.520	-

ಸದಲಗಾ ಕ್ಷೇತ್ರದಲ್ಲಿ ಹಸಿರು ಮತ್ತು ಕೇಸರಿ ಕಾರ್ಡು ವಿತರಣೆ

1817- ಶ್ರೀ ಪ್ರಕಾಶ ಬಿ.ಹುಕ್ಕೇರಿ (ಸದಲಗಾ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸದಲಗಾ ಮತ ಕ್ಷೇತ್ರದಲ್ಲಿರುವ ಹಸಿರು ಮತ್ತು ಕೇಸರಿ ಕಾರ್ಡುದಾರರ ಸಂಖ್ಯೆ ಎಷ್ಟು? (ಹಳ್ಳಿಗಳ ವಾರು ವಿವರ ನೀಡಲಾಗುವುದು).